ಅಮ್ಮ ತನ್ನನ್ನು ಒಂದು ಗಳಿಗೆಯೂ ಬಿಟ್ಟಿರುತ್ತಿರಲಿಲ್ಲ. ಅಪ್ಪನೂ ಅಷ್ಟೆ! ಅಪ್ಪ ಆಶ್ರಮದ ಮುಖಂಡನೇನೂ ಆಗಿರಲಿಲ್ಲ.

ಆದರೆ ಆಶ್ರಮದಲ್ಲಿ ಗೌರವಾನ್ವಿತನಾಗಿದ್ದ. ಆತನ ಮಾತಿಗೆ ಬೆಲೆಯಿತ್ತು. ಎಲ್ಲರೊಂದಿಗೆ ನಗುನಗುತ್ತ ಮಾತಾಡುತ್ತಿದ್ದ. ಎಲ್ಲರ ಸಮಸ್ಯೆಯನ್ನೂ ತನ್ನ ತಲೆಯ ಮೇಲೆ ಹೊತ್ತುಕೊಳ್ಳುತ್ತಿದ್ದ ಸಂಯಮಶೀಲ ವ್ಯಕ್ತಿ!

ಅಪ್ಪಅಮ್ಮನನ್ನು ಎಷ್ಟೊಂದು ಪ್ರೀತಿಸುತ್ತಿದ್ದ! ತನ್ನನ್ನೂ ಸಹಾ! ರಾತ್ರಿ ಕತ್ತಲಿನಲ್ಲಿ ಅವರಿಬ್ಬರ ಮಧ್ಯೆ ಮಲಗಿದರೇನೇ ತನಗೆ ನಿದ್ದೆ. ಇಲ್ಲದಿದ್ದರೆ ಇಲ್ಲ! ಒಂದೊಂದು ಸಲ, ರಾತ್ರಿ ಯಾವುದೋ ಒಂದು ಹೊತ್ತಿನಲ್ಲಿ ಎಚ್ಚರವಾಗಿ ಅಕ್ಕಪಕ್ಕ ಕೈಹಾಕಿದರೆ ಅಪ್ಪಅಮ್ಮ ಇಬ್ಬರೂ ಇರುತ್ತಿರಲಿಲ್ಲ! ಎದ್ದು ಕುಳಿತುಕೊಳ್ಳಲೂ ಆಗದೆ, ಹಾಗೇ ಮಬ್ಬುಗತ್ತಲಿನಲ್ಲಿ ಕಣ್ಣು ಕಿಸಿದು ಸುತ್ತ ನೋಡುವಾಗ ಅಡುಗೆ ಮನೆಯಿಂದ ಅಪ್ಪಅಮ್ಮ ಮೆಲ್ಲಗೆ ನಗುತ್ತಿರುವುದು ಕೇಳಿಸಿತ್ತು. ಇಷ್ಟು ಹೊತ್ತಿನಲ್ಲಿ ಏನು ಮಾಡ್ತಿದ್ದಾರೆ ಅಡುಗೆ ಮನೆಯಲ್ಲಿ? ಅದೂ ತನ್ನೊಬ್ಬಳನ್ನೇ ಬಿಟ್ಟು? ಸಿಟ್ಟು ಬರುತ್ತಿತ್ತು ತನಗೆ. ಹೆದರಿಕೆಯೂ ಆಗುತ್ತಿತ್ತು. ಬಾಯಿಬಿಟ್ಟು ಕೂಗಲೂ ಆಗುತ್ತಿರಲಿಲ್ಲ. ಎಷ್ಟೋ ಹೊತ್ತಿನ ಬಳಿಕ ಅಮ್ಮ ಬಂದು ಮುಗುಳ್ನಗೆಯ ಮುಖದೊಂದಿಗೆ ತಬ್ಬಿಕೊಳ್ಳುತ್ತಾ, ಹೆದರಿಕೆಯಾಯ್ತಾ ಪುಟ್ಟೀ? ಎನ್ನುತ್ತಿದ್ದಳು. ಅಪ್ಪ ಇಬ್ಬರನ್ನು ಸೇರಿಸಿಯೇ ಅಪ್ಪಿಕೊಂಡು ಮಲಗಿರುತ್ತಿದ್ದ.

ಅದೆಲ್ಲ ಅರ್ಥವಾಗುವಷ್ಟು ತಾನು ದೊಡ್ಡವಳಾದ ಬಳಿಕವೂ ಅಪ್ಪ ಏನೂ ಬದಲಾಗಲಿಲ್ಲ. ಅದೇ ಪ್ರೀತಿ, ಅದೇ ರಸಿಕತೆ!

ತನಗಾಗ ಹದಿನೇಳನೆಯ ವರ್ಷ ನಡೆಯುತ್ತಿತ್ತಲ್ಲ!



## ಸುಧಾ ಚಿದಾನಂದಗೌಡ

ಕತೆಗಾರ್ತಿ, ಕವಯಿತ್ರಿ, ಸಂಶೋಧಕಿ ಸುಧಾ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯವರು. ಅವರು ಸ್ತ್ರೀ ಸಂವೇದನೆಯುಳ್ಳ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. 'ಬದುಕು ಪ್ರಿಯವಾಗುವ ಬಗೆ', 'ದಿಟ್ಟಿಯು ನಿನ್ನೊಳು ನೆಟ್ಟಿರೆ', 'ಕನ್ನಡಿಯನ್ನು ನೋಡಲಾರೆ' ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಬಯಲ ಧ್ಯಾನ' (ಕವನ ಸಂಕಲನ), 'ಪ್ರಿಯಸಖೀ ಪಾತರಗಿತ್ತೀ' (ಪ್ರಬಂಧ ಸಂಕಲನ), ಶೇಕ್‌ಸ್ಪಿಯರ್ ಕೃತಿಗಳ ಸ್ತ್ರೀವಾದಿ ಅಧ್ಯಯನ 'ಪರಿಷ್ಕೃತೆ' ಕೃತಿಗಳು ಪ್ರಕಟವಾಗಿವೆ. ಅವರ ನಾಟಕಗಳು: 'ಕ್ಷಮಿಸಿ ನಾನು ಅರಳಬೇಕು', 'ನೀಲಮತ್ಸ್ಯ'. ಪ್ರಸ್ತುತ ಹಗರಿಬೊಮ್ಮನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿದ್ದಾರೆ. ಬರವಣಿಗೆಯ ಜೊತೆಗೆ 'ಸುಯೋಧನ' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದಾರೆ.